## ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ

**ಸೆಷನ್ಸ್ ಕೇಸ್ ನಂಃ 26/2017 ಫ್ರಾ.ಸಾ.41**

**ಚಾಸಾ.72/ಹೆ.ಸಾ.1**

| | | |
|---|---|---|
| ಸಾಕ್ಷಿದಾರರ ಹೆಸರು | - | ಕೆ.ಮಹೇಶ್ಚಂದ್ರ |
| ತಂದೆಯ ಹೆಸರು | - | ಕೃಷ್ಣಮೂರ್ತಿ |
| ವಯಸ್ಸು | - | 60 ವರ್ಷ |
| ಉದ್ಯೋಗ | - | ನಿವೃತ್ತ ಅಸಿಸ್ಟೆಂಟ್ ಕಮೀಶನರ್ |
| ವಿಳಾಸ | - | ಬೆಂಗಳೂರು |

ದಿನಾಂಕಃ 29-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ನಾನು 2016-17 ನೇ ಸಾಲಿನಲ್ಲಿ ನಾನು ಉಡುಪಿಯ ತಾಲೂಕು ದಂಡಾಧಿಕಾರಿ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣದಲ್ಲಿ ಕುಂದಾಪುರ ಸಹಾಯಕ ಆಯುಕ್ತರ ಆದೇಶದ ಮೇರೆಗೆ ದಿನಾಂಕ 11.01.2017 ರಂದು ಮೃತ ದೇಹವನ್ನು ತನಿಖೆಗಾಗಿ ಪೆರ್ಣಂಕಿಲ ಗ್ರಾಮದ ವರ್ವಾಡಿ ಎಂಬಲ್ಲಿಗೆ ಹೋಗಿರುತ್ತೇನೆ. ಆ ಸಮಯದಲ್ಲಿ ಪೋಲಿಸರೊಂದಿಗೆ ನಾಲ್ಕು ಆರೋಪಿತರು ಇದ್ದು ಅವರು ಸ್ಥಳವನ್ನು ತೋರಿಸಿರುತ್ತಾರೆ. ಆ ಸ್ಥಳದಲ್ಲಿ ಹಾಜರಿದ್ದ ಚಾಸಾ17 ಮತ್ತು 18 ಇವರು ಆರೋಪಿತರು ತೋರಿಸಿದ ಸ್ಥಳದಿಂದ ಮಣ್ಣು ಸರಿಸಿ ಮೃತ ದೇಹವನ್ನು ಮೇಲಕ್ಕೆ ಎತ್ತಿರುತ್ತಾರೆ. ಆ ಸಮಯದಲ್ಲಿ ಸತೀಶ್ ನಾಯ್ಕ ಹಾಜರಿದ್ದು ತನ್ನ ಅಣ್ಣ ಸಂತೋಷ ನಾಯ್ಕ ಎಂದು ಗುರುತಿಸಿರುತ್ತಾರೆ. ಮೃತ ದೇಹವನ್ನು ಪರಿಶೀಲಿಸಲಾಗಿ, ಎರಡು ಕಾಲುಗಳು ತೊಡೆಗಳ ಭಾಗದಿಂದ ಕತ್ತರಿಸಿ ದೇಹದಿಂದ ಬೇರ್ಪಡಿಸಿ ಗೋಣಿ ಚೀಲದಲ್ಲಿ ದೇಹ ಮತ್ತು ಕಾಲುಗಳನ್ನು ಪ್ರತ್ಯೇಕವಾಗಿ ತುಂಬಿಸಿರುತ್ತಾರೆ. ಮೃತ ದೇಹವು ಕೊಳೆತ ಸ್ಥಿತಿಯಲ್ಲಿ ಕಂಡು

ಬಂದಿರುತ್ತದೆ. ಮೃತ ದೇಹದಲ್ಲಿ ಒಟ್ಟು ಎಂಟು ಕತ್ತರಿಸಿದ ಗಾಯಗಳು ಇದ್ದು ಅವುಗಳನ್ನು ಪರಿಶೀಲಿಸಿರುತ್ತೇನೆ. ಸದ್ರಿ ಗಾಯಗಳನ್ನು ಶವ ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ. ಕೆಎಂಸಿ ಫಾರೆನ್ಸಿಕ್ ವಿಭಾಗದ ತಜ್ಞರು ಕೂಡ ಸ್ಥಳದಲ್ಲಿ ಹಾಜರಿರುತ್ತಾರೆ. ಡಿ.ಎನ್.ಎ ಪರೀಕ್ಷೆಗೆ ಒಳಪಡಿಸಲು ತನಿಖಾಧಿಕಾರಿಯವರಿಗೆ ಸೂಚಿಸಿರುತ್ತೇನೆ.

2. ಈ ಬಗ್ಗೆ ವಿವರವಾದ ಪಂಚನಾಮೆಯನ್ನು ತಯಾರಿಸಿರುತ್ತೇನೆ. ಸದ್ರಿ ಪಂಚನಾಮೆ ಯನ್ನು ಈಗಾಗಲೇ ನಿಪಿ-47 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-47(ಸಿ) ಎಂದು ಗುರುತಿಸಲಾಯಿತು. ಪಂಚರಾದ ಕಿಟ್ಟ ಅಮೀನ್, ಕರುಣಾಕರ, ಬಾಚು ಇವರ ಸಮಕ್ಷಮದಲ್ಲಿ ಮೃತ ದೇಹ ಪರಿಶೀಲಿಸಿ ಪಂಚನಾಮೆ ತಯಾರಿಸಿರುತ್ತೇನೆ ಹಾಗೂ ಪಂಚನಾಮೆಗೆ ಪಂಚ ಸಾಕ್ಷಿದಾರರ ಸಹಿ ಪಡೆದಿರುತ್ತೇನೆ. ಸ್ಥಳದಲ್ಲಿದ್ದ ಸತೀಶ್ ನಾಯ್ಕ ಇವರನ್ನು ವಿಚಾರಿಸಿ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ಸತೀಶ್ ನಾಯ್ಕ ನನ್ನ ಮುಂದೆ ನಿಪಿ-13 ರಂತೆ ಹೇಳಿಕೆ ಕೊಟ್ಟಿರುತ್ತಾನೆ. ಪಂಚಸಾಕ್ಷಿದಾರರನ್ನು ಸ್ಥಳಕ್ಕೆ ಬರಮಾಡಿಕೊಂಡ ಬಗ್ಗೆ ಅವರಿಗೆ ನೋಟೀಸ್ ನೀಡಿರುತ್ತೇನೆ. ಸದ್ರಿ ನೋಟೀಸನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-92 ಎಂದು, ಸಾಕ್ಷಿಯ ಸಹಿಯನ್ನು ನಿಪಿ-92(ಎ) ಎಂದು ಗುರುತಿಸಲಾಯಿತು. ಅಸಿಸ್ಟೆಂಟ್ ಕಮೀಶನರ್ ಇವರು ಹೂತು ಹಾಕಿದ ಶವವನ್ನು ಹೊರ ತೆಗೆದು ಕ್ರಮ ಜರುಗಿಸುವ ಬಗ್ಗೆ ತೆಗೆದುಕೊಂಡ ನಡವಳಿಯ ಪ್ರತಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-93 ಎಂದು ಗುರುತಿಸಲಾಯಿತು. ನಂತರ ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಕೆಎಂಸಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ಶವ ದೊರೆತ ಸ್ಥಳದ ದಾಖಲೆಯನ್ನು ಒದಗಿಸಲು ಪೋಲಿಸರು ಮನವಿ ಮಾಡಿದ್ದು, ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಮತ್ತು ಆರ್.ಟಿ.ಸಿ.ಯನ್ನು ವರದಿಯೊಂದಿಗೆ ಕೊಟ್ಟಿದ್ದೇನೆ. ಅವುಗಳನ್ನು ಒಟ್ಟಾಗಿ ನಿಪಿ-94 ಎಂದು ಗುರುತಿಸಲಾಯಿತು. ವರದಿಯಲ್ಲಿದ್ದ ಸಹಿಯನ್ನು ನಿಪಿ-94(ಎ) ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲುಃ 2 ನೇ ಆರೋಪಿ ಪರವಾಗಿ ಶ್ರೀ ಆರ್.ಪಿ. ವಕೀಲರಿಂದಃ</u>**

ಪಂಚರಿಗೆ ನೋಟೀಸನ್ನು ಪೋಲಿಸರು ಜಾರಿ ಮಾಡಿರುತ್ತಾರೆ. ಆ ದಿನ ಕಚೇರಿಯಿಂದ ನೇರವಾಗಿ ಸದ್ರಿ ಸ್ಥಳಕ್ಕೆ ಹೋಗಿರುತ್ತೇನೆ. ಸ್ಥಳದ ಬಗ್ಗೆ ಮಾಹಿತಿಯನ್ನು ಪೋಲಿಸರು ನೀಡಿರುತ್ತಾರೆ. ಸ್ಥಳಕ್ಕೆ ಪೋಲಿಸರ ಜೊತೆ ಹೋಗಿರುತ್ತೇನೆ. ಶವ ಕೊಳೆತ ಸ್ಥಿತಿಯಲ್ಲಿತ್ತು. ಶವ ಕೊಳೆತು ಹೋಗಿದ್ದ ಕಾರಣ ದೇಹದ ಮೇಲಿನ ಯಾವುದೇ ಗಾಯಗಳನ್ನು ಗುರುತಿಸಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತ ದೇಹ ಜಾಸ್ತಿ ಕೊಳೆತು ಹೋಗಿದ್ದ ಕಾರಣ ಅದನ್ನು ಗುರುತುಹಿಡಿಯಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-47 ಕ್ಕೆ ವೈಜ್ಞಾನಿಕ ಅಧಿಕಾರಿಗಳ ಸಹಿ ಪಡೆದಿಲ್ಲ. ಸದ್ರಿ ಅಧಿಕಾರಿಗಳು ಶವ ಪಂಚನಾಮೆ ಸಮಯದಲ್ಲಿ ಸಹಕರಿಸಿರುತ್ತಾರೆ. ಅವರು ಯಾವ ರೀತಿ ಸಹಕರಿಸಿರುತ್ತಾರೆ ಎಂದು ನಿಪಿ-47 ರಲ್ಲಿ ನಮೂದು ಮಾಡಿಲ್ಲ. ಪಂಚರನ್ನು ನಾವು ಸ್ಥಳಕ್ಕೆ ಹೋದ ನಂತರದಲ್ಲಿ ಕರಿಸಿದ್ದೇವೆ. ಕೆಲಸದವರನ್ನು ಪೋಲಿಸರು ಕರೆಸಿರುತ್ತಾರೆ.

2. ಶವವನ್ನು ಹೊರಗೆ ತೆಗೆದ ಸ್ಥಳವನ್ನು ಯಾವುದೇ ಆರೋಪಿತರು ನನಗೆ ತೋರಿಸಿಲ್ಲ ಎಂದರೆ ಸರಿಯಲ್ಲ. ಶವವನ್ನು ಗುರುತಿಸುವ ಸಾಧ್ಯತೆ ಇರಲಿಲ್ಲ ಮತ್ತು ಆ ಕಾರಣಕ್ಕೆ ಶವವನ್ನು ಯಾರೂ ಗುರುತು ಹಿಡಿದಿಲ್ಲ ಎಂದರೆ ಸರಿಯಲ್ಲ. ಶವ ಕೊಳೆತ ಕಾರಣ ಮರಣದ ಕಾರಣ ಕಂಡುಹಿಡಿಯಲು ಆಗಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಮಾಹಿತಿ ಹಿನ್ನೆಲೆಯಲ್ಲಿ ನಿಪಿ-47 ರಲ್ಲಿ ಸದ್ರಿ ಶವ ಸಂತೋಷ ನಾಯ್ಕ ಎಂಬವರದ್ದು ಎಂದು ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. ಸತೀಶ್ ನಾಯ್ಕ ನಿಪಿ-13 ರಂತೆ ನನ್ನ ಸಮಕ್ಷಮ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-47 ನ್ನು ಪೋಲಿಸರ ಕಡೆಯಿಂದ ನನ್ನ ಹೇಳಿಕೆ ಪ್ರಕಾರ ಬರೆಸಿರುತ್ತೇನೆ.

ಸಹಾಯಕ ಆಯುಕ್ತರು ನನ್ನನ್ನು ಹೂತಿರುವ ಶವವನ್ನು ಹೊರ ತೆಗೆಯಲು ಅಧಿಕಾರ ಹಸ್ತಾಂತರಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಸೃಷ್ಟಿಸಿದ ನಿಪಿ-47 ಕ್ಕೆ ನಾನು ಸಹಿ ಮಾಡಿದ್ದೇನೆ ಮತ್ತು ನಾನು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಸತೀಶ್ ನಾಯ್ಕ ಶವವನ್ನು ಗುರುತಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದ್ರಿ ಸ್ಥಳದಲ್ಲಿ ಯಾವುದೇ ಆರೋಪಿತರು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-94 ರ ದಾಖಲೆಗಳಿಗೆ ಮತ್ತು ತಕ್ಷೀರು ನಡೆದಿದೆ ಎನ್ನುವ ಸ್ಥಳಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಉಳಿದ ಆರೋಪಿತರ ಪರ ವಕೀಲರು ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆ:** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.